'ವಿಶ್ವ, ಇನ್ನೂರೈವತ್ತು ವರ್ಷಗಳ ಹಿಂದೆ ನಮ್ಮ ಹಿರಿಯರು ಮಹಾರಾಷ್ಟ್ರದ ರತ್ನಗಿರಿ ಕಡೆಯಿಂದ 'ದಕ್ಷಿಣ ಕನಡಾ' ಜಿಲ್ಲೆಯ ಕರಾವಳಿಗೆ ಬಂದರು ಅಂತ ನಮ್ಮ ಅಜ್ಜಯ್ಯ ಹೇಳ್ತಿದ್ದರು...' ಎಂದು ಸತ್ಯ ಮಾತು ಆರಂಭಿಸಿದ. ಆಮೇಲೆ ಕರಾವಳಿ ಬಿಟ್ಟು ಮಲೆನಾಡಿಗೆ ಬಂದರಂತೆ. ಅದಕ್ಕೂ ಒಂದು ಕಾರಣವಿತ್ತು. ಬ್ರಿಟಿಷ್ ಕಲೆಕ್ಟರೊಬ್ಬನ ಹೆಂಡತಿಗೆ ಕ್ಷಯ ಇತ್ತಂತೆ. ನಮ್ಮ ಮುತ್ತಜ್ಜನೊಬ್ಬ ಅದನ್ನು ಗುಣಪಡಿಸಿದರಂತೆ. ಕಲೆಕ್ಟರಿಗೆ ಸಂತೋಷವಾಗಿ ಮಲೆನಾಡಿನಲ್ಲಿ ನಿಮಗೆ ಇಷ್ಟವಾಗುವ ಊರಿಗೆ ಹೋಗಿ ನಿಮ್ಮ ಕೈಲಿ ಆಗುವಷ್ಟು ಜಮೀನು ಸಾಗುವಳಿ ಮಾಡಿಕೊಂಡು ಇರಬಹುದು ಎಂದರಂತೆ. ನಮ್ಮ ಒಬ್ಬ ಮುತ್ತಜ್ಜ ತಮ್ಮ ಪರಿವಾರದ ಜತೆ ಮಲೆನಾಡಿಗೆ ಬಂದರು. ನಲವತ್ತು ಎಕರೆಯಷ್ಟು ಕಾಡು ಕಡಿದು ಸಾಗುವಳಿ ಶುರು ಮಾಡಿದರು. ಅಲ್ಲೇ ಮನೆ ಕಟ್ಟಿ ನೆಲೆಸಿದರು. ಹತ್ತಾರು ಎಕರೆ ಭೂಮಿಯಲ್ಲಿ ಬಾಳೆ ಬೆಳೆದರು. ಅದರಿಂದಾಗಿಯೇ ನಮ್ಮೂರಿಗೆ ಬಾಳೆಬೈಲು ಅನ್ನೋ ಹೆಸರು ಬಂತು. ಬಾಳೆಬೈಲಲ್ಲಿ ನೆಲೆ ನಿಂತ ಮೇಲೆ ನಮ್ಮವರು ನರಸಿಂಹ ದೇವರನ್ನು ಮರೆತರು. ಕರಾವಳಿಯಲ್ಲೇ ಉಳಿದಿದ್ದ ನಮ್ಮ ಹಿರಿಯರು ದೇವರಪೀಠ ಇದ್ದ ಜಮೀನನ್ನು ಮಾರಾಟ ಮಾಡಿ ನಾಗಪುರದ ಕಡೆಗೆ ಹೋದರಂತೆ. ಆಮೇಲೆ ದೇವರ ಪೂಜೆ ತಪ್ಪಿಹೋಯ್ತು.

ನಮ್ಮ ಅಜ್ಜಂದಿರು ಕಾಫಿ, ಮೆಣಸು, ಅಡಿಕೆ, ಬಾಳೆ ಬೆಳೆದು ಹೇರಳವಾಗಿ ದುಡ್ಡು ಮಾಡಿದರು. ಅಕ್ಕಪಕ್ಕದಲ್ಲಿದ್ದ ಇನ್ನಷ್ಟು ಜಮೀನುಗಳನ್ನು ಖರೀದಿಸಿದರು. ಆಸ್ತಿ ಹೆಚ್ಚಾದ ಮೇಲೆ ಅಣ್ಣತಮ್ಮಂದಿರಲ್ಲಿ ಅಸೂಯೆ ಹೆಚ್ಚಾಯಿತು. ಆಮೇಲೆ ನಮ್ಮ ಅಜ್ಜನೊಬ್ಬ ನಿಗೂಢವಾಗಿ ಕಣ್ಮರೆಯಾದರಂತೆ! ಅವರು ಕಾಣೆಯಾಗಿದ್ದಕ್ಕೆ ಅವರ ಒಬ್ಬ ತಮ್ಮ ಕಾರಣ ಅನ್ನೋದು ಗೊತ್ತಾದ ಮೇಲೆ ಒಟ್ಟು ಕುಟುಂಬದವರ ಮನಸ್ಸುಗಳು ಒಡೆದವು. ಮನೆ, ಆಸ್ತಿ ಪಾಲಾಯಿತು. ಒಂದು ಮನೆ ಐದು ಮನೆಗಳಾದವು. ಆಶ್ಚರ್ಯದ ಸಂಗತಿ ಏನು ಗೊತ್ತಾ, ಆ ನಾಲ್ಕೂ ಮನೆಗಳು ಈಗ ಉಳಿದಿಲ್ಲ! ಅವರ ಆಸ್ತಿಪಾಸ್ತಿಗಳು ಏನಾದವು? ಅವರ ಮಕ್ಕಳು, ಮರಿ ಎಲ್ಲಿದ್ದಾರೆ ಅನ್ನೋದೂ ಗೊತ್ತಿಲ್ಲ! ಏನೇನೋ ಆಗಿ ಹೋಯ್ತು. ಯಾರಿಗೆ ಏನು ಸಿಟ್ಟಿತ್ತೋ? ಅಣ್ಣನ ಮಕ್ಕಳು ಸತ್ತ ಮೇಲೆ ನಾನು ನಮ್ಮ ಹಿರಿಯರ ಬಗ್ಗೆ ಯೋಚನೆ ಮಾಡೋಕೆ ಶುರು ಮಾಡಿದ್ದೀನಿ!. ಅವರ ಮನಸ್ಸಿಗೆ ಎಷ್ಟು ನೋವಾಗಿತ್ತೋ ಅನ್ನಿಸ್ತಿದೆ ಎಂದು ಹೇಳಿ ದೊಡ್ಡದಾಗಿ ನಿಟ್ಟುಸಿರು ಬಿಟ್ಟ.

ಭೂ ಸುಧಾರಣೆ ಕಾನೂನು ಬರೋ ಹೊತ್ತಿಗೆ ನಮ್ಮಪ್ಪಯ್ಯನಿಗೆ ಉಳಿದದ್ದು ಇಪ್ಪತ್ತು ಎಕರೆ ಗದ್ದೆ ಮತ್ತು ಸ್ವಲ್ಪ ತೋಟ. ನಾವು ಐದು ಜನ ಅಣ್ಣತಮ್ಮಂದಿರು. ಇಬ್ಬರು ಸಣ್ಣ ಪ್ರಾಯದಲ್ಲೇ ಮಲೇರಿಯಾ ಬಂದು ತೀರಿಕೊಂಡರಂತೆ. ದೊಡ್ಡಣ್ಣನಿಗೆ ಮತ್ತು ನಂಗೆ ತಲಾ ಆರು, ಚಿದಂಬರನಿಗೆ ಎಂಟು ಎಕರೆ ಗದ್ದೆ ಭೂಮಿ ಬಂತು. ಅಡಿಕೆ ತೋಟಕ್ಕೆ ಹಳದಿರೋಗ ಬಂದು ಹಾಳಾಯ್ತು. ಅಪ್ಪಯ್ಯ ಬದುಕಿರೋವರೆಗೆ ಮನೆ, ಜಮೀನು ನೋಡಿಕೊಳ್ತಿದ್ದರು. ದೊಡ್ಡಣ್ಣ ಷೇರು ವ್ಯವಹಾರ ಮಾಡಿ ತುಂಬಾ ದುಡ್ಡು ಮಾಡಿದ. ಕೊಪ್ಪದ ಮೇನ್‌ರೋಡಲ್ಲಿ ಒಂದು ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಿಸಿ ಬಾಡಿಗೆ ಕೊಟ್ಟಿದ್ದಾನೆ. ಅವನಿಗೆ ಮೂರು ಲಕ್ಷಕ್ಕೂ ಹೆಚ್ಚು ಬಾಡಿಗೆ ಬರುತ್ತೆ. ಬ್ಯಾಂಕಿನಲ್ಲಿ ಆಫೀಸರಾಗಿದ್ದರಿಂದ ಪೆನ್ಷನ್ನೂ ಬರುತ್ತೆ. ಅವನ ಮಕ್ಕಳಿಗೆ ವಿದ್ಯೆ ಹತ್ತಲಿಲ್ಲ. ಮೂವರೂ ಬಾಡಿಗೆ ದುಡ್ಡು ತಿಂದುಕೊಂಡು ನೆಮ್ಮದಿಯಾಗಿದ್ದರು. ಅಣ್ಣನಿಗೆ ಒಬ್ಬಳು ಮಗಳಿದ್ದಾಳೆ. ಅಣ್ಣನ ಇಬ್ಬರು ಗಂಡು ಮಕ್ಕಳಲ್ಲಿ ಮೂರು ಗಂಡು ಮತ್ತು ಒಬ್ಬಳು ಹೆಣ್ಣು ಮೊಮ್ಮಕ್ಕಳು. ಎಲ್ಲರೂ ಇನ್ನೂ ಚಿಕ್ಕವರು. ಅವರ ಮದುವೆ, ಮುಂಜಿಗಳನ್ನು ನಮ್ಮ ಚಿದಂಬರನೇ ಮುಂದೆ ನಿಂತು ಮಾಡಬೇಕು.

'ನಮ್ಮ ಕುಟುಂಬದಲ್ಲಿ ಸಾವಿನ ಸರಣಿ ಮುಂದುವರಿಯುವುದು ಬೇಡ ಅಂತ ಅಣ್ಣ ಪದೇ ಪದೇ ಹೇಳೋಕೆ ಶುರು ಮಾಡಿದ್ದಾನೆ. ವಯಸ್ಸಾದಂತೆ ಎಲ್ಲರಿಗೂ ಸಾವಿನ ಭಯ ಹೆಚ್ಚಾಗುತ್ತೆ ಅಂತಾರೆ. ಕುಲದೇವರ ಪೂಜೆ, ಪಿತೃಗಳ ಕೋಪ ಶಮನ ಪೂಜೆ ಆಗೋವರೆಗೆ ನಾನು ಬದುಕಿದ್ದರೆ ಸಾಕು ಅಂತ ಅಣ್ಣ ನಾವು ಉಡುಪಿಗೆ ಹೊರಡುವಾಗ ಹೇಳಿದ. ಇಬ್ಬರೂ ಒಟ್ಟಿಗೆ ಹೋಗ್ತಿದ್ದೀರಿ. ಚಿದಂಬರನಿಗೆ ಆತುರ ಜಾಸ್ತಿ. ನೋಡಿಕೊಂಡು ಡ್ರೈವ್ ಮಾಡೋಕೆ ಹೇಳು ಅಂತ ಐದಾರು ಸಲ ಹೇಳಿದ. ನನ್ನ ಮೊಮ್ಮಕ್ಕಳಿಗೆ ನೀವೇ ದಿಕ್ಕು. ಅವರನ್ನು ನಿಮಗೆ ಒಪ್ಪಿಸಿ ನಾನು ಕಣ್ಣು ಮುಚ್ಚುತ್ತೇನೆ...' ಅಂದ. ಅವನ ಮಾತು ಕೇಳಿ ಸಂಕಟವಾಯ್ತು. ನಮ್ಮೆಲ್ಲರಿಗೂ ಕೆಟ್ಟದಾಗುತ್ತೆ ಅನ್ನೋ ಭಯ ಅವನಿಗೆ.